ಪ್ರಜಾವಾಣಿ

**Friday, February 26th, 2010**



ಜೈನ್ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಗುರುವಾರ ಏರ್ಪಡಿಸಿದ್ದ 'ಬೆಂಕಿ ಮತ್ತು ಕಟ್ಟಡಗಳ ಸುರಕ್ಷತೆ' ಕುರಿ ಕಾರ್ಯಾಗಾರದಲ್ಲಿ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವಿಭಾಗದ ಡಿಜಿಪಿ ಜೀಜಾ ಮಾಧವನ್ ಹರಿಸಿಂಗ್ ಅವರು ಜೈನ್ ವಿ.ವಿಯ ವಿಪತ್ತು ನಿವಾರಣಾ ಕೇಂದ್ರದ ನಿರ್ದೇಶಕ ಡಾ. ಆರ್.ಎನ್.ಅಯ್ಯಂಗಾರ್, 'ಎಮರ್ಜಿಂಗ್ ಮಾರ್ಕೆಟ್ಸ್'ನ ಉಪಾಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಆರ್.ಎ. ವೆಂಕಟಾಚಲಂ, ಪ್ರೊ. ಎಚ್.ಎಸ್.ಮುಕುಂದ, ಜೈನ್ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ. ಆರ್. ಚೆನ್ ರಾಜ್ ಜೈನ್ ಅವರೊಡನೆ ಮಾತುಕತೆ ನಡೆಸಿದರು. –ಪ್ರಜಾವಾಣಿ ಚಿತ್ರ

# 'ಗುಣಮಟ್ಟದ ಎಲೆಕ್ಟ್ರಿಕ್ ಉಪಕರಣ ಬಳಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸುರಕ್ಷತೆ ವಿಚಾರದಲ್ಲಿ ಸ್ವಲ್ಪ ಎಡವಿದರೂ ದೊಡ್ಡ ಪ್ರಮಾಣದಲ್ಲಿ ದಂಡ ತೆರಬೇಕಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಎಚ್ಚರ ತಪ್ಪಬೇಡಿ' ಎಂದು ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವಿಭಾಗದ ಡಿಜಿಪಿ ಜೀಜಾ ಮಾಧವನ್ ಹರಿಸಿಂಗ್ ಕಿವಿ ಮಾತು ಹೇಳಿದರು.

'ಬೆಂಕಿ ಮತ್ತು ಕಟ್ಟಡಗಳ ಸುರಕ್ಷತೆ' ಕುರಿತು ಜೈನ್ ವಿಶ್ವವಿದ್ಯಾಲಯ ಏರ್ಪಡಿಸಿದ್ದ ಕಾರ್ಯಾಗಾರವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಕಟ್ಟಡಗಳಿಗೆ ಗುಣಮಟ್ಟದ ವೈರ್, ಪ್ಲಗ್ ಹಾಗೂ ಇತರ ಎಲೆಕ್ಟ್ರಾನಿಕ್ ಸಲಕರಣೆಗಳನ್ನು ಅಳವಡಿಸಿ. ಅಲ್ಪ ಹಣ ಉಳಿಸಲೆಂದು ಕಳಪೆ ಅಥವಾ ಕೆಳ ದರ್ಜೆ ಸರಕುಗಳನ್ನು ಖರೀದಿಸಲು ಮುಂದಾಗಬೇಡಿ' ಎಂದು ಅವರು ಸಲಹೆ ನೀಡಿದರು.

'ಆಕಸ್ಮಿಕವಾಗಿ ಸಂಭವಿಸುವ ಅಗ್ನಿ ದುರಂತಗಳಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಹೇಳುವುದು ಕಷ್ಟಕರ' ಎಂದ ಅವರು, 'ಕಟ್ಟಡ ನಿರ್ಮಾದ ನಿರ್ಮಾಣಗಾರರು , ಯೋಜನೆ ಸಿದ್ಧಪಡಿಸಿದವರು, ಕಟ್ಟಡದ ಮಾಲೀಕರು, ಬಾಡಿಗೆದಾರರಲ್ಲಿ ಯಾರು ತಪ್ಪಿತಸ್ಥರು ಎಂದು ಹೇಳಬೇಕು?' ಎಂದು ಅವರು ಪ್ರಶ್ನಿಸಿದರು.

'ಇಂತಹ ದುರಂತಗಳು ಸಂಭವಿಸಿದಾಗ ಎದೆಗುಂದಬಾರದು. ಜನರನ್ನು ಸಂರಕ್ಷಿಸುವುದೇ ಪ್ರಥಮ ಕರ್ತವ್ಯ ಆಗಬೇಕು. ಇದಕ್ಕೆ ಅಗ್ನಿಶಾಮಕ ಪಡೆಗೆ ಅಗತ್ಯ ಸಹಕಾರ ನೀಡಬೇಕು' ಎಂದು ಹೇಳಿದರು.

ಜೈನ್ ವಿ.ವಿಯ ವಿಪತ್ತು ನಿವಾರಣಾ ಕೇಂದ್ರದ ನಿರ್ದೇಶಕ ಡಾ. ಆರ್.ಎನ್.ಅಯ್ಯಂಗಾರ್ ಮಾತನಾಡಿ, ಅಗ್ನಿ ಅನಾಹುತಗಳಿಂದ ರಕ್ಷಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಚಾಣಕ್ಯ ತನ್ನ ಅರ್ಥಶಾಸ್ತ್ರ ಕೃತಿಯಲ್ಲಿ ತಿಳಿಸಿದ್ದಾರೆ. ಇದಕ್ಕೆಂದು ಈ ಕೃತಿಯಲ್ಲಿ 2 ಅಧ್ಯಾಯವನ್ನು ಮೀಸಲಿರಿಸಿದ್ದಾರೆ ಎಂದ ಅವರು, ಇಂತಹ ದುರಂತಗಳು ಸಂಭವಿಸಿದಾಗ ಅಗ್ನಿ ಶಾಮಕ ಪಡೆ, ಸಿವಿಲ್ ಎಂಜಿನಿಯರ್‌ಗಳು ಹಾಗೂ ವಾಸ್ತುಶಿಲ್ಪಿಗಳು ಜತೆಗೂಡಿ ಕೆಲಸ ನಿರ್ವಹಿಸಬೇಕು ಎಂದರು.

ಅಗ್ನಿ ಅನಾಹುತಗಳಲ್ಲಿ ಸಾವನ್ನಪ್ಪುತ್ತಿರುವ ಸಂಖ್ಯೆ ಭಾರತದಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಈ ವಿಷಯದಲ್ಲಿ ಭಾರತ ವಿಶ್ವದಲ್ಲಿಯೇ ಎರಡನೇ ಸ್ಥಾನ ಪಡೆದಿದೆ. ದೇಶದಲ್ಲಿಯೇ ಅತ್ಯಧಿಕ ಅಗ್ನಿ ದುರಂತಗಳು ದೆಹಲಿಯಲ್ಲಿ ಸಂಭವಿಸುತ್ತಿದೆ. ಈ ದುರಂತಗಳಲ್ಲಿ ಸಾವನ್ನಪ್ಪುವ ಪ್ರತಿ ನೂರು ಮಂದಿಯಲ್ಲಿ 22.5 ಮಂದಿ ದೆಹಲಿಯವರು ಎಂದು ಅವರು ಅಂಕಿ ಅಂಶ ಸಹಿತ ಮಾಹಿತಿ ನೀಡಿದರು.

'ಎಮರ್ಜಿಂಗ್ ಮಾರ್ಕೆಟ್ಸ್' ಸಂಸ್ಥೆಯ ಉಪಾಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಆರ್.ಎ. ವೆಂಕಟಾಚಲಂ, ಜೈನ್ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ.ಆರ್. ಚೆನ್‌ರಾಜ್ ಜೈನ್ ಮಾತನಾಡಿದರು.